ಕರ್ನಾಟಕ ವಿಧಾನ ಸಭೆ

ಮಂಗಳವಾರ, 23ನೇ ಆಗಸ್ಟ್ 1983/ಭಾದ್ರಪದ 1, 1905

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಂಭಾಗಣದಲ್ಲಿ

ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಭೆಯಲ್ಲಿ ಕೊಡಲಾದ ಉತ್ತರಗಳು

ವಿಷಯ :– ಶಿರಾ ತಾಲ್ಲೂಕು, ಬುಕ್ಕಾ ಪಟ್ಟಣ ಹೋಬಳಿ ಗಾಮನಗುಡ್ಡದ ಹತ್ತಿರವಿರುವ ಪಿಕ್ ಆಪ್ ಕಮ್ ಮೇಸನರಿವಾಲ್ ನಿರ್ಮಾಣದ ಕುರಿತಾಗಿ

ಪ್ರ. 116(4) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).––ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :––

ಅ. ತುಮಕೂರು ಜಿಲ್ಲಾ ಶಿರಾ ತಾಲ್ಲೂಕು ಬುಕ್ಕಾ ಪಟ್ಟಣ ಹೋಬಳಿ, ಗಾಮನಗುಡ್ಡದ ಹತ್ತಿರ ಶಿರಾ ಪಟ್ಟಣಕ್ಕೆ ನೀರನ್ನು ಪೂರೈಸುವ ಹಾಗೂ ಹತ್ತಿರದ ಹಳ್ಳಿಗಳ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ನೀರಾವರಿ ಪಿಕ್ ಆಪ್ ಕಮ್ ಮೆಸನರಿ ವಾಲ್‌ದ ನಿರ್ಮಾಣದ ಪ್ರಸ್ತಾವನೆಯು ಸರಕಾರದ ಗಮನದಲ್ಲಿದೆಯೇ ;

ಬ. ಹಾಗಿದ್ದರೆ ಈ ಯೋಜನೆಯು ಯಾವಾಗ ತೆಗೆದುಕೊಳ್ಳಲ್ಪಡುವುದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿಯ ರಾಜ್ಯ ಸಚಿವರು) :––

ಅ. ಸರಕಾರದ ಹತ್ತಿರ ಇಂಥ ಯಾವ ಪ್ರಸ್ತಾವನೆಯೂ ಇಲ್ಲ.

ಬ. ಈ ಪ್ರಶ್ನೆಗೆ ಉತ್ತರಿಸುವ ಸಂದರ್ಭವು ಉದ್ಭವಿಸುವುದಿಲ್ಲ.

ಶ್ರೀ ಬಿ. ಗಂಗಣ್ಣ.––1962ನೇ ಇಸವಿಯಲ್ಲಿ ಇಲ್ಲಿ ಕೆರೆ ಕಟ್ಟಬೇಕೆಂದು ಉದ್ದೇಶ ಇಟ್ಟುಕೊಂಡು ಸರ್ವೆ ಮುಂತಾದ ಕಾರ್ಯಕ್ರಮಗಳನ್ನು ನಡೆಸಿ ನಂತರ ಇಲ್ಲಿ ಕೆರೆ ಕಟ್ಟಲು ಆಗುವುದಿಲ್ಲವೆಂಬ ಅಭಿಪ್ರಾಯ ಪಟ್ಟರು. ಈ ಬಗ್ಗೆ ದಾಖಲೆಗಳು ಸರ್ಕಾರದಲ್ಲಿ ಇರಬಹುದು, ಇಲ್ಲದಿರಬಹುದು ಆದರೆ ಕೇಳಿರತಕ್ಕಂಥ ಪ್ರಶ್ನೆಗೆ ಸರ್ಕಾರದವರು ತೀವ್ರಗಮನ ಹರಿಸಿ ಈ ಭಾಗದಲ್ಲಿ ನೀರಾವರಿ ವ್ಯವಸ್ಥೆ ಮತ್ತು ಶಿರಾ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡಲೇ ಮಾಡುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.––ಇದರ ಕೆಳಗೆ ಯಾವ ಗಾಯತ್ರಿ ಕೆರೆ ಇದೆ; ಅದಕ್ಕೇ ನೀರು ಸಾಲದೆ ಪೂರ್ತಿ ಆಚ್ಚುಕಟ್ಟಿಗೆ ನೀರನ್ನು ಕೊಡಲು ಸಾಧ್ಯವಿಲ್ಲವಾಗಿದೆ. ಹೀಗಿರುವಾಗ ಹೊಸ ಕೆರೆ ಕಟ್ಟಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಗಂಗಣ್ಣ.––ಗಾಯತ್ರಿ ಕೆರೆ ವಿಚಾರದಲ್ಲಿ ಪಿಟಿಪಿನ್ ಕಮಿಟಿ ರಿಪೋರ್ಟಿನಲ್ಲಿ ಸರ್‌ಪ್ಲಸ್ ನೀರು ಎಂದಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.––ಗಾಯತ್ರಿ ಕೆರೆಯಿಂದ 2360 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕೊಡಬೇಕೆಂದಿದ್ದರೂ, ಅರ್ಧಭಾಗದಷ್ಟು ಪ್ರದೇಶಕ್ಕೆ ಮಾತ್ರ ನೀರು ಕೊಡಲು ಸಾಧ್ಯವಾಗಿದೆ. ಇಂತಹ ಸಂದರ್ಭದಲ್ಲಿ ನೀರಾವರಿ pick up cum masnory wall ನಿರ್ಮಾಣ ಸಾಧ್ಯವಾಗಲಾರದು.

ಶ್ರೀ ಬಿ. ಗಂಗಣ್ಣ.––ಇದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.––ಪರಿಶೀಲನೆ ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ವಾಸ್ತವಾಂಶ ನೋಡಿದರೆ ಇದು ಸಾಧ್ಯವಾಗಲಾರದು ಎಂದೆನಿಸುತ್ತದೆ, ಆದರೂ ಇದನ್ನು ಪುನರ್ ಪರಿಶೀಲನೆ ಮಾಡೋಣ.

ವಿಷಯ :– ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ನಂ. 1 ಶ್ರೀಮಾನ್ ಮಲ್ಲಾರಗೌಡ ಎಸ್. ಪಾಟೀಲ್, ವಿಧಾನಸಭಾ ಸದಸ್ಯರು ಇವರಿಂದ

ಪ್ರ. 117(1) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).––ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :––

ಅ. ಘಟಪ್ರಭಾ ನದಿಯ ಮೇಲೆ ನಿರ್ಮಿಸಿದ ಸೇತುವೆಗೆ ತಗಲಿದ ಹಣದ ಮೊತ್ತವೆಷ್ಟು ;

ಆ. ಕೇಂದ್ರ ಸರ್ಕಾರದಿಂದ ಧನ ಸಹಾಯ ಪದೆದ ಹಣದ ಮೊತ್ತವೆಷ್ಟು ;

ಇ. ರಾಜ್ಯ ಸರ್ಕಾರದಿಂದ ಖರ್ಚಾದ ಹಣದ ಮೊತ್ತವೆಷ್ಟು ;

ಈ. ಘಟಪ್ರಭಾ ಸೇತುವೆ ಮೇಲೆ ವಾಹನಗಳಿಗಾಗಿ ತೆಗೆದುಕೊಳ್ಳುತ್ತಿರುವ ಕರವನ್ನು ಇಲ್ಲಿಯವರೆಗೆ ಎಷ್ಟು ಪಡೆಯಲಾಗಿದೆ ;

ಉ. ಸೇತುವೆಗೆ ತಗುಲಿದ ಖರ್ಚನ್ನು ಈಗಾಗಲೇ ತರಾತಕಣಿ ಮಾಡುತ್ತಿರುವ ಹಣವು ಹೆಚ್ಚಾಗಿದೆಯೇ ಅಥವ ಕಡಿಮೆ ಆಗಿದೆಯೇ ತಿಳಿಸುವುದು ;

ಊ. ಕರವನ್ನು ವಸೂಲು ಮಾಡುವುದು ನಿಲ್ಲಿಸುವ ಕುರಿತು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿಗಳು) :--

ಅ. ಸೇತುವೆ ನಿರ್ಮಾಣದ ಒಟ್ಟು ಖರ್ಚು ರೂ. 1,32,10,803-00.

ಆ. ಕೇಂದ್ರ ಸರಕಾರದಿಂದ ಧನ ಸಹಾಯ ಪಡೆದ ಹಣ ರೂ. 45,64,317-00.

ಇ. ರಾಜ್ಯ ಸರಕಾರದಿಂದ ಖರ್ಚಾದ ಹಣ ರೂ. 86,46,486-00.

ಈ. ದಿನಾಂಕ 15-7-1983ರವರೆಗೆ ಒಟ್ಟು ವಸೂಲು ಮಾಡಿದ ಕರ ರೂ.ಗಳು 78,98,000.

ಉ. ಇದುವರೆಗೂ ವಸೂಲಾಗಿರುವ ಕರವು ಸೇತುವೆ ನಿರ್ಮಾಣಕ್ಕೆ ಖರ್ಚಾಗಿರುವುದಕ್ಕಿಂತ ಕಡಿಮೆಯಾಗಿದೆ.

ಊ. ಈ ವಿಷಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಕರ ವಸೂಲು ಮಾಡುತ್ತಿರುವುದು ರಾಜ್ಯ ಸರ್ಕಾರವೇ ಎಂಬುದು ನನ್ನ ಭಾವನೆ. ಆದರೆ ರಾಜ್ಯ ಹೆದ್ದಾರಿ ಸಂಖ್ಯೆ 4ರಲ್ಲಿ ಆಗುತ್ತಿರುವಂತಹ ಹಲವಾರು ತೊಂದರೆಗಳನ್ನು ಸರ್ಕಾರದವರು ಗಮನಿಸಿದ್ದಾರೆಯೇ ? ಇದರ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯ ಏನು ?

ಶ್ರೀ ಎಚ್.ಡಿ. ದೇವೇಗೌಡ.—ತೊಂದರೆಗಳೇನು ?

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಒಂದು ಸಲಕ್ಕೆ ಸುಮಾರು 150ಕ್ಕಿಂತ ಹೆಚ್ಚು ವಾಹನಗಳು ನಿಂತುಬಿಡುತ್ತವೆ. ಟ್ಯಾಕ್ಸ್ ವಸೂಲು ಮಾಡುವುದರಿಂದ ಅನಾನುಕೂಲವಾಗುತ್ತದೆ. ಈವರೆಗೆ ಒಟ್ಟು 78 ಲಕ್ಷ ರೂಪಾಯಿಗಳನ್ನು ವಸೂಲು ಮಾಡಲಾಗಿದೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇದರ ಮೇಲೆ ಏನು ಮಾಡಬೇಕೆಂಬ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ ? ಇದರಿಂದ ಹೆಚ್ಚು ಜನರಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ಇದನ್ನು ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸೇತುವೆ ನಿರ್ಮಾಣಕ್ಕೆ ಒಟ್ಟು ರೂ. 1,32,10,803 ರೂಪಾಯಿಗಳು ಖರ್ಚಾಗಿದೆ. 1 ಕೋಟಿ 32 ಲಕ್ಷ ರೂಪಾಯಿಗಳನ್ನು ಈಗ ವಸೂಲುಮಾಡಬೇಕಾಗಿದೆ. ರಾಜ್ಯ ಹೆದ್ದಾರಿಗಳ ಮೇಲೆ ಇಂತಹ ದೊಡ್ಡ ಪ್ರಮಾಣದ ಸೇತುವೆಯನ್ನು ಕಟ್ಟಿದಾಗ ಕರ ಹಾಕಬೇಕಾಗುತ್ತದೆ. ಸಂಪನ್ಮೂಲ ಸಂಗ್ರಹಣೆ ದೃಷ್ಟಿಯಿಂದ ಇದು ಅವಶ್ಯವಾದದ್ದು. ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ಸೌಕರ್ಯ ಒದಗಿಸಬೇಕಾದರೆ ಈ ಜನ ಸ್ವಲ್ಪ ಹಣ ಕೊಡಬೇಕಾಗುತ್ತದೆ.

ಶ್ರೀ ವಿ.ಎಸ್. ಕೌಜಲಗಿ.—ಈಗ ತಾವು ರಾಷ್ಟ್ರೀಯ ಹೆದ್ದಾರಿಯ ಮೇಲೆ ಕಟ್ಟಿರತಕ್ಕಂತಹ ಸೇತುವೆಗಳಿಗೆ ಕರವನ್ನು ವಸೂಲು ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಹಾಗಿದ್ದರೆ, ಇದೇ ರೀತಿಯಲ್ಲಿ ರಾಜ್ಯದಲ್ಲಿ ಇನ್ನೂ ಯಾವ ಯಾವ ಕಡೆಗಳಲ್ಲಿ ಕರವನ್ನು ವಸೂಲು ಮಾಡುತ್ತಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ,—25ಲಕ್ಷ ರೂಪಾಯಿಗಳಿಗಿಂತ ಮೇಲ್ಪಟ್ಟು ಕಟ್ಟಲ್ಪಡುವ ಎಲ್ಲ ಸೇತುವೆಗಳ ಮೇಲೆ ಕರವನ್ನು ಹಾಕಬಹುದೆಂದು ಸೆಂಟ್ರಲ್ ಆಕ್ಟ್‌ನಲ್ಲೇ ಇದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—25 ಲಕ್ಷಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಟ್ಟತಕ್ಕಂತಹ ಸೇತುವೆಗಳ ಮೇಲೆ ಕರವನ್ನು ಹಾಕುತ್ತೇವೆಂದು ಹೇಳಿದ್ದೀರಿ. ಇದೇ ರೀತಿ ಮಲಪ್ರಭಾ ನದಿ ಹಾಗೂ ಹಿರಣ್ಯಕೇಶಿ ನದಿಗಳ ಮೇಲೂ ಕಟ್ಟಲ್ಪಡುವ ಸೇತುವೆಗಳ ಮೇಲೂ ಕರವನ್ನು ಹಾಕುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಹೌದು. ಕಾಳಿ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ಕಟ್ಟಿದ್ದೇವೆ. ಅದರ ಒಟ್ಟು ವೆಚ್ಚ 3 ಕೋಟಿ 60 ಲಕ್ಷ ರೂಪಾಯಿಗಳು. ಅಲ್ಲೂ ಕರವನ್ನು ಹಾಕುತ್ತೇವೆ. ಅಂದರೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ 25 ಲಕ್ಷಕ್ಕಿಂತ ಮೇಲ್ಪಟ್ಟು ಹಣವನ್ನು ಖರ್ಚುಮಾಡಿ ಕಟ್ಟತಕ್ಕಂತಹ ಎಲ್ಲ ಸೇತುವೆಗಳ ಮೇಲೂ ಕರವನ್ನು ಹಾಕುವುದಕ್ಕೆ ಕಾನೂನು ಇದೆ, ಆ ಪ್ರಕಾರ ಕ್ರಮವನ್ನು ಕೈಗೊಳ್ಳುತ್ತೀದ್ದೇವೆ. ರಾಜ್ಯದ ಹೆದ್ದಾರಿಗಳಲ್ಲೂ ಕಟ್ಟಲ್ಪಟ್ಟಿರುವ ಹಾಗೂ ಕಟ್ಟಲ್ಪಡುವ ಸೇತುವೆಗಳ ಮೇಲೂ ಇದೇ ರೀತಿಯ ನೀತಿಯನ್ನು ಅನುಸರಿಸಬೇಕೆಂಬುದು ಸರ್ಕಾರದ ಅಭಿಪ್ರಾಯ. ಏಕೆಂದರೆ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಆ ರೀತಿಯ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡಬೇಕಾದರೂ ರಾಜ್ಯದ ಸಂಪನ್ಮೂಲವನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ವಿಷಯ :— ಹೆಸರೂರು ಯಾತ ನೀರಾವರಿ ಮತ್ತು ರಾಟೆ ನೀರಾವರಿ ಯೋಜನೆ (ಮುಂಡರಗಿ ತಾಲ್ಲೂಕು) ಕಾರ್ಯ ಪ್ರಾರಂಭದ ಬಗ್ಗೆ.

ಪ್ರ. 118(17) ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?